ತಾರೀಖು 12ನೆ ಏಪ್ರೆಲ್ 1907.

ನಂ. 9454—ಎಡ್ಯು. 132-06—9, ಸ್ಯ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಸ್ವತ್ತುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ಕ್ಲೋಸ್‌ಪೇಟೆ ಸಬ್ ತಾಲ್ಲೂಕಿನಲ್ಲಿರುವ ಕ್ಲೋಸ್‌ಪೇಟೆ ಹಿಂದೂಸ್ತಾನಿ ಸ್ಕೂಲಿನ ವಹಾರವನ್ನು ವಿಸ್ತರಿಸುವುದಕ್ಕೆ ಅವಶ್ಯಕವಾಗಿವೆ :—

ಜಿಲ್ಲೆ.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಜಮೀನಿನ ಅಥವಾ ಕಟ್ಟಡದ ವಿವರಣೆ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.			ಚತುರ್ಗಡಿ.			
									ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
						ಅಡಿಗಳು.	ಅಡಿಗಳು.	ಚದರಡಿಗಳು.				
ಬಿಂಗಳೂರು	ಕ್ಲೋಸ್‌ಪೇಟೆ	ಕಸಬಾ ಹೋಬಳಿ	ಕ್ಲೋಸ್‌ಪೇಟೆ	ಶ್ರೀರಂಗಮ್ಮ	ಖಾನೇಷುಮಾರಿ ನಂ. 103 ಪಾಳು ನಿವೇಶನ.	58	22	1276	ದವಲತ್‌ಖಾರ್ ಮಿಯಮತ್ತು ಕಂಡೂರು ನಂಜುಂಡಯ್ಯನ ಹಿತ್ತಲು ಮತ್ತು ಕೆ. ಗುಂಡಯ್ಯನ ಪಾಳು ನಿವೇಶನ	ರಸ್ತೆ ಮತ್ತು ಒಂದು ಹೆಂಚಿನ ಮನೆಯೂ ಸಹ (ಸ್ಕೂಲ್,	ರಸ್ತೆ	ರಸ್ತೆ
				ರಾಮಕೃಷ್ಣಯ್ಯ.	ಖಾನೇಷುಮಾರಿ ನಂ. 106 ಪಾಳು ನಿವೇಶನ.	50	63	3150	ಡಿಟೋ	ಡಿಟೋ	ಡಿಟೋ	ಡಿಟೋ

ತಾರೀಖು 15ನೆ ಏಪ್ರೆಲ್ 1907.

ನಂ. ಜಿ. 6377—ಜಿ. ಎಂ. 255—06—6, ಇಂಡಿಯಾ ದೇಶದಿಂದ ಹೋಗುವ ಕೂಲಿಯವರಿಗೆ ಕ್ಯಾಲಿಫೋರ್ನಿಯಾದಲ್ಲಿ ಕೆಲಸ ಸಿಕ್ಕು ವಹಾಗಿಲ್ಲವೆಂದು ಸ್ಯಾನ್‌ಫ್ರಾನ್ಸಿಸ್ಕೋವಿನಲ್ಲಿನ ಬ್ರಿಟಿಷ್ ಕಾನ್ಸುಲರ್ ಅಧಿಕಾರಿಗಳು ಎಂದರೆ—ಆ ದೇಶದಲ್ಲಿ ಬ್ರಿಟಿಷ್ ಪ್ರಜೆಗಳಿಗೆ ಸಹಾಯ ಮಾಡುವ ಸರ್ಕಾರಿ ವಕೀಲರು ತಿಳಿಸಿರುತ್ತಾರೆಂದು ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸಿ ಇದೆ.

ತಾರೀಖು 15ನೆ ಏಪ್ರೆಲ್ 1907.

(ಪೇಟೆಂಟೆ ಯೊ ವಿಶಿಷ್ಟಾಧಿಕಾರ ಪತ್ರಿಕೆ).

ನಂ. ಜಿ. 6388—ಜಿ. ಎಂ. 208-05—19, 1894ನೆ ಇಸವಿಯ 11ನೆ ನಂಬರು (ನವೀನ ಕಲ್ಪನೆಗಳ ಮತ್ತು ನಕ್ಷೆಗಳ) ರೆಗ್ಯುಲೇಷನಿನ 8, 9, 10 ಮತ್ತು 11ನೆ ಪ್ರಕರಣಗಳನ್ನನುಸರಿಸಿ ಇದರಡಿ ಕಂಡ ಬಂದು ಹೊಸ ಕಲ್ಪನೆಯ ವಿವರಣೆಯು ದಾಖಲುಮಾಡಲ್ಪಟ್ಟಿರುತ್ತದೆ. ಇಷ್ಟವಿರುವವರು ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದ ಜನರಲ್ ಮತ್ತು ರವಿನ್ಯೂ ಇಲಾಖೆಗಳ ಸೆಕ್ರೆಟರಿಯವರಿಗೆ ಬರೆದುಕೊಂಡು ಬಂದು ರೂಪಾಯಿ ಫೀಜು ಪಾವತಿ ಮಾಡಿ ಅವರ ಕಚೇರಿಯಲ್ಲಿ ಸದರಿ ವಿವರಣೆಯನ್ನು ಪರೀಕ್ಷಿಸಿ ನೋಡಬಹುದು :—

ಟ್ರಾನ್ಸ್‌ವಾಲ್ ಕಾಲನಿಯಲ್ಲಿ ಜೋಹಾನ್ಸ್‌ಬರ್ಗ್ ಪಟ್ಟಣದ ಕ್ಯಾರೀಫಾ ಚಿನ ದ ಗಣಿ ಕಂಪನಿಯ ಗಣಿಗಳ ಇಂಜಿನೀರ್ ಮಿ॥ ಹರ್ಬರ್ಟ್ ಸ್ಟ್ರಾಸ್ ಸ್ಪಾರ್ಕ್ ಎಂಬವರಿಂದ ಮಾಡಲ್ಪಟ್ಟಿದ್ದು—

"ಚಿನ್ನದ ಅದುರುಗಳಿಂದ ಚಿನ್ನವನ್ನು ತೆಗೆಯುವುದಕ್ಕೋಸ್ಕರ ಒಂದು ಹೊಸ ವಿಧಾನ, ತಕ್ಕಾಪಿ, ಸ್ವರ್ಣಮುಖಿ ಎಂಬ ಕಲ್ಲಿನ ಅದುರುಗಳನ್ನು ಸಾವಕಾಶವಾದ ಕಯಾನೈಡ್ ಎಂಬ ದ್ರಾವಕದೊಡನೆ ಸೇರಿಸಿ ಕೆಲಸ ಮಾಡುವುದರಿಂದುಂಟಾಗುವ ವಂಡಿನಿಂದ ಚಿನ್ನವನ್ನು ತೆಗೆಯುವದಕ್ಕೆ ವಿಶೇಷವಾಗಿ ಉಪಯೋಗಿಸತಕ್ಕ ಹೊಸ ವಿಧಾನ".

ತಾರೀಖು 20ನೆ ಏಪ್ರೆಲ್ 1907.

ನಂ. ಜಿ. 3235—ಪೋಲೀಸು 1—05, ಸ್ಯ 1890ನೆ ಇಸವಿಯ 6ನೆ ನಂಬರ್ ಮೈಸೂರು ಆಯುಧಗಳ ರಗ್ಯುಲೇಷನಿನ 22ನೆ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರವನ್ನು ಚಲಾಯಿಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಶಿವಮೊಗ್ಗ ಡಿಸ್ಟ್ರಿಕ್ಟ್ ತೀರ್ಥಹಳ್ಳಿ ತಾಲ್ಲೂಕು ಭೀಮನಕಟ್ಟೆ ಮಠದ ಶ್ರೀ ರಘುಭೂಷಣ ತೀರ್ಥ ಸ್ವಾಮಿಯವರನ್ನು, ಸದರಿ ರಗ್ಯುಲೇಷನಿನ 8, 9, 10 ಮತ್ತು 11ನೆ ಪ್ರಕರಣಗಳಲ್ಲಿ ನಮೂದಾದ, ಫಿರಂಗಿ, ಹಡಗುಗಳನ್ನು ಹಾಸಿ ನಾಶಮಾಡುವ ಉದ್ದೇಶದಿಂದ ಸಮುದ್ರದೊಳಗೆ ಇಟ್ಟ ಯಂತ್ರಗಳು, ಯುದ್ಧದ ಆಕಾಶಬಾಣಗಳು ಮತ್ತು ಆಯುಧಗಳನ್ನು ಮದ್ದುಗಳನ್ನು ತಯಾರಿಸುವ